**ದಿನಾಂಕಃ 29/03/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ ಃ**

5. ದೂರು ನೀಡಿದ ನಂತರ ಪೊಲೀಸರಿಗೆ ಕ್ರಯ ಪತ್ರವನ್ನು ಹಾಜರುಪಡಿಸಿದೆ. ಅದನ್ನು ಅವರು ಅಮಾನತು ಪಡಿಸಿಕೊಂಡರು. ಸಾಕ್ಷಿಯು ಅಮಾನತು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅಮಾನತು ಮಹಜರ್ ನ್ನು **ನಿಪಿ. 3** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.3(ಎ)** ಎಂದು ಗುರುತಿಸಲಾಯಿತು. ಕ್ರಯ ಪತ್ರವನ್ನು ನಾನು ರಾಜೇಶ ರವರಿಂದ 2012 ರಲ್ಲಿ ಬರೆಸಿಕೊಂಡಿರುತ್ತೇನೆ. ಸಾಕ್ಷಿಯು ಕ್ರಯಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಕ್ರಯ ಪತ್ರವನ್ನು **ನಿಪಿ.4** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.4(ಎ)** ಎಂದು ಗುರುತಿಸಲಾಯಿತು. ಪೊಲೀಸರು 6 ಹಾಳೆಗಳ ಮೇಲೆ ನನ್ನ ಸಹಿಯನ್ನು ಪಡೆದು ಅದನ್ನು ಅಮಾನತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಯು 6 ಹಾಳೆಗಳ ಮೇಲೆ ಇರುವ ಹೊಲಿಕಾ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಹಾಳೆಗಳನ್ನು ಒಟ್ಟಾರೆಯಾಗಿ **ನಿಪಿ.5** ಎಂದು ಗುರುತಿಸಲಾಯಿತು. ಮಹಜರ್ ಮಾಡುವ ಕಾಲದಲ್ಲಿ ಚಾಸಾ.22 ದೇವೇಂದ್ರ ಮತ್ತು ಚಾಸಾ.23 ಜನಾರ್ದನ ರವರು ಇದ್ದರು

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು).

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
ಪಿರಿಯಾಪಟ್ಟಣ.